ಕೂದಲೂ ಕೊಂಕದಂತೆ, ದೊಡ್ಡ ಗೋಣಿಚೀಲಕ್ಕೆ ತುಂಬಿ, ಊರಿನವರಿಗೆ ಹಸ್ತಾಂತರಿಸಿ ಅವತ್ತಿನ ಹಣವನ್ನು ಪಡೆಯುತ್ತಾನೆ. ಊರಿನವರೂ ಕೋತಿಗಳನ್ನು 10–15 ಮೈಲಿ ದೂರದ ಇಡುವಾಣಿ, ಗೇರುಸೊಪ್ಪೆ, ಜೋಗ ಕಾಡುಗಳಲ್ಲಿ ಬಿಟ್ಟು ಊರಿಗೆ ಬಂದು ನಿಟ್ಟುಸಿರು ಬಿಡುತ್ತಿದ್ದರು.
ಈ ವಿಧಾನವು ಸುತ್ತಮುತ್ತಲ ಊರಿನವರಿಗೆ ಕೆಲವು ತಿಂಗಳು ನೆಮ್ಮದಿಯನ್ನು ತಂದರೂ, ಶ್ರೀಮಠದವರ ನಿದ್ದೆಯನ್ನು ಕೆಡಿಸಿದ್ದು ಮಾತ್ರ ಸುಳ್ಳಲ್ಲ.

ಗೋಣಿಚೀಲದಿಂದ ಹೊರಗೆ ಬಂದು, ಕಾಡು ಹೊಕ್ಕ ಕೋತಿಗಳು, ಕಾಡಿನ ಅಂಚಿನಲ್ಲಿಯೇ ಇದ್ದ ಶ್ರೀಮಠದ 'ಹೈಟೆಕ್ ತೊಟ'ಕ್ಕೆ ಲಗ್ಗೆ ಇಟ್ಟವು. ಕೇವಲ ತೋಟಕ್ಕಷ್ಟೇ ಅಲ್ಲದೆ, ಹಣ್ಣುಹಂಪಲು, ಕೊಬ್ಬರಿ, ದವಸ ಧಾನ್ಯಗಳ ಉಗ್ರಾಣಕ್ಕೂ ನುಗ್ಗಿದವು. ಮಠದಲ್ಲಿದ್ದ ವೇದಮಂತ್ರ ಕಲಿಯುವ ಮಕ್ಕಳು ಅಂಗಳದಲ್ಲಿ ಒಣಗಿಸಿಡುತ್ತಿದ್ದ ಬಟ್ಟೆ, ಪಂಚೆಯಷ್ಟೇ ಯಾಕೆ ಕೌಪೀನದ ಮೇಲೂ ಮಲವಿಸರ್ಜನೆ ಮಾಡಿ ಓಡಿ ಹೋಗಿಬಿಡುತ್ತಿದ್ದವು!



ಇವೆಲ್ಲವುಗಳಿಂದ ಇಡೀ ಮಠವೇ ರೋಸಿಹೋಯಿತು. ತೋಟದ ಮೇಲೆ ಕೋಟ್ಯಂತರ ಹಣ ಹಾಕಿದ್ದ ಕಂಪನಿಯವರು ಕಂಗಾಲಾದರು. ಬೆಂಗಳೂರಿನಿಂದ ವಿಜ್ಞಾನಿಗಳ ತಂಡವೊಂದು ಬಂದು ಮಠದಲ್ಲಿ ಮೂರ್ನಾಲ್ಕು ದಿನ ಮೊಕ್ಕಾಂ ಮಾಡಿ, ಸ್ವಾಮಿಗಳ ಆಶೀರ್ವಾದವನ್ನು ಪಡೆದು ನಗುಮೊಗದಲ್ಲಿ ಹೊರಟುಹೋಯಿತು.

ಅವರು ಇರುವಷ್ಟೂ ದಿನ ತೋಟಕ್ಕೆ ಯಾರನ್ನೂ ಒಳಕ್ಕೆ ಬಿಟ್ಟುಕೊಂಡಿರಲಿಲ್ಲ. ತೋಟದಲ್ಲಿ ಮಂಗನನ್ನು ಕಾಯುತ್ತಿದ್ದವರೂ ಕೂಡ ಹೊರಗಿಂದಲೇ ಕಾಯಬೇಕಿತ್ತು. ಆಮೇಲೆ ಒಂದು ವಾರದ ನಂತರ, 'ಅವರು ತೋಟ ಕಾಯೋ ಕೆಲಸಕ್ಕೂ ಬರಬೇಕಾಗಿಲ್ಲ' ಎಂದು ತಿಳಿಸಿ, ಅವರನ್ನೂ ಕಳಿಸಿಬಿಟ್ಟರು. ಒಂದು ವಾರದ ನಂತರ ತೋಟಕ್ಕೆ ಹೋದ ರಾಜಾರಾಮನಿಗೆ ಆಶ್ಚರ್ಯ! ಬಾಳೆಗೊನೆಯಲ್ಲಿ ಒಂದು ವಿಚಿತ್ರವಾದ ಬದಲಾವಣೆ! ಒಂದಿಷ್ಟು ಗೊನೆಯಲ್ಲಿ ಮಾತ್ರ, ಒಂದೋ ಎರಡೋ ಕಾಯಿಗಳು ಮಾತ್ರ ಹಣ್ಣಾಗಿ, ಉಳಿದವು ಸಹಜವಾಗಿ ಹಸಿರು ಬಣ್ಣದಲ್ಲೇ ಇದ್ದವು!

ಮಂಗಗಳು ಕಾಯಿಗಿಂತ ಹಣ್ಣನ್ನು ತಿನ್ನುವುದಕ್ಕೆ ನುಗ್ಗುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಮಂಗನ ಕಾವಲನ್ನು ನಿಲ್ಲಿಸಿದ ಮರುದಿನವೇ ಅವು ತೋಟಕ್ಕೆ ದಾಳಿ ಇಟ್ಟವು. ನೋಡನೋಡುತ್ತಿದ್ದ ಹಾಗೆ ಅವು, ಬಾಳೆ ಮರದಿಂದ ಪುತಪುತ ಕೆಳಗೆ ಬಿದ್ದು ಸಾಯತೊಡಗಿದವು! ಮರುದಿನ, ಅದರ ಮರುದಿನ, ಇದೇ ಕತೆ! ತೋಟದ ತುಂಬೆಲ್ಲಾ ಹೆಣದ ರಾಶಿ!

ಜನರು ತಾವು ಕಂಡ ಬೆರಗನ್ನು ತಮ್ಮಷ್ಟಕ್ಕೆ ಅನುಭವಿಸುವ ಕಾಲವೆ ಇದು? ಯಾವನೋ ಒಬ್ಬ, ಕೆಳಗೆ ಸತ್ತು ಬಿದ್ದ ಮಂಗಗಳನ್ನು ಮೊಬೈಲಲ್ಲಿ ಫೋಟೊ ತೆಗೆದು ವಾಟ್ಸ್‌ಆ್ಯಪ್, ಯುಟ್ಯೂಬಲ್ಲಿ ಹಾಕಿದ್ದೇ ತಡ, ಶುರುವಾಯಿತು...